ಓ.ಎಸ್.ನಂ.45/2024

ಪಿ.ಡಬ್ಲೂಃ 1

ದಿನಾಂಕಃ 06/11/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರವಾಗಿ ಶ್ರೀ ಜಿ.ಕೆ.ಎಂ.ವಕೀಲರಿಂದ**

6. ನಿಪಿ-1 ದಾಖಲೆಗೆ ಸಾಕ್ಷಿದಾರರಾಗಿ ಸಹಿ ಮಾಡಿದಂತಹ ರಾಮಪ್ಪ, ಪುಷ್ಪಾವತಿ ಮತ್ತು ದಾಖಲೆ ಬರೆದ ವಕೀಲರಾದಂತಹ ಪ್ರೀತಿ ಎಂಬುವವರು ಮಧ್ಯಾಹ್ನ 3.00 ರಿಂದ 3.30 ಗಂಟೆಗೆ ಬಂದಿದ್ದರು. ಸದರಿ ದಿನದಂದು ನಾವು ನ್ಯಾಯಾಲಯಕ್ಕೆ ಬಂದಿರುವುದಿಲ್ಲ ಆದರೆ ವಕೀಲರ ಸಂಘಕ್ಕೆ ಬಂದಿರುತ್ತೇವೆ. ನಿಪಿ-1 ದಾಖಲೆಯನ್ನು ವಕೀಲರ ಸಂಘದ ಬಳಿ ಪ್ರತಿವಾದಿಯವರಿಂದ ಬರೆಸಿಕೊಂಡಿದ್ದು ಮನೆಗೆ ಹೋಗಿದ್ದ ನಂತರದಲ್ಲಿ ನಾನು ಪ್ರತಿವಾದಿಯವರಿಗೆ ರೂ.5,00,000/- ಗಳನ್ನು ಕೊಟ್ಟಿರುತ್ತೇನೆ. ನಿಪಿ-1 ಬರೆದಂತಹ ದಿನದಂದು ನ್ಯಾಯಾಲಯಲ್ಲಿ ತುಂಬಾ ಜನ ಮತ್ತು ಕಕ್ಷಿದಾರರು ಇದ್ದರು.

7. ದಿನಾಂಕ 10.12.2022 ರಂದು 2 ನೇ ಶನಿವಾರ ಆಗಿದ್ದು ನ್ಯಾಯಾಲಯಕ್ಕೆ ರಜೆ ಇರುತ್ತದೆ ಎಂದರೆ ನನಗೆ ನೆನಪಿಲ್ಲ. ಸಾಕ್ಷಿ ಮುಂದುವರೆದು ಒಂದು ದಿನ ಮುಂಚಿತವಾಗಿಯೇ ನ್ಯಾಯಾಲಯಕ್ಕೆ ಬಂದು ನಿಪಿ-1 ದಾಖಲೆಯನ್ನು ಬರೆಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 09.12.2022 ರಲ್ಲಿ ನಿಪಿ-1 ದಾಖಲೆಯನ್ನು ತಯಾರಿಸಿರುತ್ತೇವೆ. ನನ್ನ ವಾದ ಪತ್ರದಲ್ಲಿ ಮತ್ತು ಪ್ರತಿವಾದಿಯವರಿಗೆ ನೀಡಿದಂತಹ ನೋಟೀಸ್ಸಿನಲ್ಲಿ ನಾನು ದಿನಾಂಕ 09.12.2022 ರಂದು ಡಿಪಿ ನೋಟ್ ನ್ನು ಬರೆಸಿಕೊಂಡಿರುತ್ತೇನೆ ಎಂದು ತಿಳಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಹಣ ಕೊಡುವ ದಿನವನ್ನು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 09.12.2022 ರಂದು ನಿಪಿ-1 ದಾಖಲೆಯನ್ನು ಪ್ರತಿವಾದಿಯವರು ನನಗೆ ಬರೆದುಕೊಟ್ಟಿರುತ್ತಾರೆ. ಸದರಿ ದಿನದಂದು ಸಾಕ್ಷಿದಾರರು ಮತ್ತು ವಕೀಲರು ನ್ಯಾಯಾಲಯದಲ್ಲಿ ಇದ್ದರು ಹಾಗೂ ನಿಪಿ-1 ದಾಖಲೆಯಲ್ಲಿ ಬರೆದುಕೊಟ್ಟಿರುತ್ತಾರೆ. ನನ್ನ ವಾದ ಪತ್ರದಲ್ಲಿ ದಿನಾಂಕ 10.12.2022 ರಂದು ನಿಪಿ-1 ದಾಖಲೆಯನ್ನು ಮಾಡಿಕೊಟ್ಟಿರುತ್ತಾರೆ ಎಂದು ಹೇಳಿರುತ್ತೇನೆ. ದಿನಾಂಕ 10.12.2022 ಸರ್ಕಾರಿ ರಜೆಯಾದ ಕಾರಣದಿಂದ ಸಾಕ್ಷಿದಾರರು ಮತ್ತು ವಕೀಲರಾದ ಪ್ರೀತಿ ಎಂಬುವವರು ವಕೀಲರ ಸಂಘಕ್ಕೆ ಬಂದಿರುವುದಿಲ್ಲ ಮತ್ತು ನಿಪಿ-1 ದಾಖಲೆಯನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಿನದಂದು ವಕೀಲರಾದ ಪ್ರೀತಿಯವರ ಕಚೇರಿಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

8. ದಿನಾಂಕ 10.12.2022 ರಂದು ಪ್ರತಿವಾದಿಯವರು ನನಗೆ ಯಾವುದೇ ನಿಪಿ-1 ಡಿಪಿ ನೋಟನ್ನು ಬರೆದುಕೊಟ್ಟಿರುವುದಿಲ್ಲ ಮತ್ತು ನಾನು ಪ್ರತಿವಾದಿಗೆ ರೂ.5,00,00/- ಹಣವನ್ನು ಸಾಲವಾಗಿ ಕೊಟ್ಟಿರುವುದಿಲ್ಲ ಎಂದರೆ ಸುಳ್ಳು. ನಿಪಿ-1 ದಾಖಲೆಯನ್ನು ನಾನು ಸೃಷ್ಟಿಸಿ

ಪಿ.ಡಬ್ಲೂಃ 1

ಪ್ರತಿವಾದಿಯ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಜಯಲಕ್ಷ್ಮೀ ಎನ್. ಬಿ)
ಹಿರಿಯ ಸಿ.ಜೆ. ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್